ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.
ದೂರವಾಣಿ ಸಂಖ್ಯೆ : 080-22212343
ಅಂತರ್ಜಾಲ : https://kptcl.karnataka.gov.in
ಇ-ಮೇಲ್ ವಿಳಾಸ : director.ahr.kptcl@gmail.com

**ಸಂಖ್ಯೆ: ಕವಿಪ್ರನಿನಿ/ಬಿ66/46695/2022-23** **ದಿನಾಂಕ:** 22 JUN 2023

## ಸುತ್ತೋಲೆ

**ವಿಷಯ:** ಜುಲೈ-2023 ರಲ್ಲಿ ನಡೆಯಲಿರುವ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗೆ ಸ್ವತಂತ್ರ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪರೇಟರ್/ಮಾಪಕ ಓದುಗ/ ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ರವರುಗಳ ಅರ್ಜಿಗಳನ್ನು ಪರಿಗಣಿಸುವ ಬಗ್ಗೆ.

**ಉಲ್ಲೇಖ:** ಇಲಾಖಾ ಪರೀಕ್ಷಾ ಶಾಖೆಯ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ66/46995/2023-24, ದಿನಾಂಕ: 02.06.2023.

*********

ಉಲ್ಲೇಖದ ಸುತ್ತೋಲೆಯ ಅನ್ವಯ ಜುಲೈ-2023 ರಲ್ಲಿ ನಡೆಯಲಿರುವ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿರುತ್ತದೆ.

ಸದರಿ ಪರೀಕ್ಷೆಗೆ, ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆ ಮೇರೆಗೆ ನೇರನೇಮಕಾತಿ ಅಡಿಯಲ್ಲಿ ಸಹಾಯಕ ಪವರ್ ಮ್ಯಾನ್/ಸ್ಟೇಷನ್ ಅಟೆಂಡೆಂಟ್ ದರ್ಜೆ-2 ಹುದ್ದೆಗೆ ನೇಮಕಾತಿಯಾಗಿ, ಪ್ರಸ್ತುತ ಆಪರೇಟರ್/ಮಾಪಕ ಓದುಗ /ಓವರ್‌ಸೀಯರ್/ ಸಹಾಯಕ ಉಗ್ರಾಣ ಪಾಲಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಹಾಜರಾಗಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಮುಂದುವರೆದು, ಸ್ವತಂತ್ರ ಪ್ರಭಾರದ ಆಧಾರದ ಮೇರೆಗೆ ನಿರ್ವಾಹಕ/ಮಾಪಕ ಓದುಗ/ ಓವರ್‌ಸೀಯರ್/ ಸಹಾಯಕ ಉಗ್ರಾಣ ಪಾಲಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಕೂಡ ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸುತ್ತಿರುವುದು ನಿಗಮದ ಗಮನಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ, ಸದರಿ ವಿಷಯವನ್ನು ಪರಿಶೀಲಿಸಲಾಗಿ, ಮಾಪಕ ಓದುಗ ಹುದ್ದೆಗೆ ಪದೋನ್ನತಿಯ ವಿಷಯದಲ್ಲಿ ಕೆಲವು ನೌಕರರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 106742-760/2019, 15677-15682/2019 ಮತ್ತು 14057-14058/2019 ಗಳ ಬಗ್ಗೆ ಮಾನ್ಯ ಉಚ್ಛನ್ಯಾಯಾಲಯ ಬೆಂಗಳೂರು ಹಾಗೂ ಧಾರವಾಡ ಪೀಠಗಳು ಈ ಕೆಳಕಂಡಂತೆ ಮಧ್ಯಂತರ ತೀರ್ಪನ್ನು ನೀಡಿರುತ್ತವೆ:

"Issue emergent notice; stay of the impugned office circular dated: 02.02.2019 issued in No: KPTCL/B16/3301/2014-15, issued by the first respondent"

ಅದರಂತೆಯೇ, ನಿಗಮ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ದೈನಂದಿನ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ, ಅರ್ಹ ನೌಕರರನ್ನು ಶೇ.30 ಮತ್ತು ಶೇ.20 ಆಪರೇಟರ್/ಓವರ್ ಸೀಯರ್/ಮಾಪಕ ಓದುಗ/ಸಹಾಯಕ ಉಗ್ರಾಣ ಪಾಲಕರು ಹುದ್ದೆಗಳಿಗೆ ಸ್ವತಂತ್ರ ಪ್ರಭಾರದಲ್ಲಿರಿಸಿ ಕಾರ್ಯನಿರ್ವಹಿಸಲು ಆದೇಶ ಜಾರಿಗೊಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸ್ವತಂತ್ರ ಪ್ರಭಾರದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪರೇಟರ್/ಓವರ್ ಸೀಯರ್/ಮಾಪಕ ಓದುಗ/ಸಹಾಯಕ ಉಗ್ರಾಣ ಪಾಲಕರು ರವರುಗಳಿಗೆ ಮೇಲೆ ತಿಳಿಸಲಾಗಿರುವ ಪ್ರಕರಣದ ತೀರ್ಪಿಗೆ ಒಳಪಟ್ಟು ಎಕ್ಸಿಕ್ಯೂಟಿವ್ ಲೋಯರ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಅದರೆ, ಸದರಿ ನೌಕರರು ಎಕ್ಸಿಕೂಟಿವ್ ಲೋಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಸಹ ಮೇಲೆ ತಿಳಿಸಲಾಗಿರುವ ಪ್ರಕರಣವು ಇತ್ಯರ್ಥವಾಗುವವರೆಗೆ ಮುಂದಿನ ಉನ್ನತ ಹುದ್ದೆ ಬಡ್ತಿಗೆ ಅಥವಾ ಅಧಿಕ ವೇತನ ಬಡ್ತಿಗೆ ಅರ್ಹರಾಗಿರುವುದಿಲ್ಲ.

"ನಿರ್ದೇಶಕರು (ಆ ಮತ್ತು ಮಾ.ಸಂ),
ರವರಿಂದ ಅನುಮೋದಿಸಲ್ಪಟ್ಟಿದೆ."

ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)
ಮತ್ತು ಸದಸ್ಯ ಕಾರ್ಯದರ್ಶಿ,
ಇಲಾಖಾ ಪರೀಕ್ಷಾ ಮಂಡಳಿ,
ಕವಿಪ್ರನಿನಿ, ಬೆಂಗಳೂರು

<u>ಪ್ರತಿಗಳು:</u>

1. ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ ಪಿಸಿಕೆಎಲ್
2. ನಿರ್ದೇಶಕರು (ಹಣಕಾಸು), ಕವಿಪ್ರನಿನಿ, ಬೆಂಗಳೂರು
3. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂ
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ
5. ಎಲ್ಲಾ ಮುಖ್ಯಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ
6. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.karnataka.gov.in** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

7. ಎಲ್ಲಾ ಅಧೀಕ್ಷಕಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
8. ಎಲ್ಲಾ ಕಾರ್ಯನಿರ್ವಾಹಕಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
9. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು (ಆಂ.ಪ.), ಕವಿಪ್ರನಿನಿ, ಎಸ್ಕಾಂ.

<u>ಪ್ರತಿಗಳು ಮಾಹಿತಿಗಾಗಿ:</u>

1. ಶ್ರೀ.ಲಕ್ಷ್ಮೀಪತಿ.ಹೆಚ್.ಆರ್, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ, ಬೆಂಗಳೂರು ನಿರ್ದೇಶಕರು ಕವಿಪ್ರನಿನಿ ಮತ್ತು ಎಸ್ಕಾಂ
2. ಶ್ರೀ.ಶಿವಣ್ಣ.ಕೆ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಸ್ಕಾಂ
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಘ, ಬೆಂಗಳೂರು
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ./ ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು